ದಿವಾಳಿಯಾದ ಡಿಕ್ರಿ ದೇಣೇದಾರ ಮೈಸೂರು ದೇವರಾಜ ಮೊಹಲಾದಲ್ಲಿರುವ ಚನ್ನಬಸಮ್ಮನ ವಿಷಯದಲ್ಲಿ—

ಸ್ಯ 1889ನೇ ಇಸವಿ ದಿವಾಳೀ ಕೇಸ್ ನಂಬರ್ 90.

ಹುಕುಂ.

ಮೇಲ್ಕಂಡ ಚನ್ನಬಸಮ್ಮನು ನಿರ್ಬಂಧದಿಂದ ಖುಲಾಸೇ ಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೊರ್ಟು ಕೂಬರೂ ಅರ್ಜೇದಾರಳಾದ ಚನ್ನಬಸಮ್ಮನ ಪರವಾಗಿ ಮತ್ತು ಸದರೀಯವಳ ಲೇಣೇದ್ರಾರಾದ 1ನೇ ಯಿಯ್ಯಣಚಾರ್ರು ತರಫೆ· 3ನೇ ವೀರಂಣ ಖುದ್ದು ಹಾಜರು ಯಿವೇಗೂ ದರ್ಯಾಪ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಪ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂಪರೆ —2ನೇ ಮೈಸೂರು ಧನಾಭಿವೃದ್ಧಿ ಬ್ಯಾಂಕ ಯೇಜಂಟ್ ಕೇಪಗಿರಿರಾವ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಚನ್ನಬಸಮ್ಮ ಯಂಬುವಳು ಹೊಂದುವದಕ್ಕೆ ಪಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವಳನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಅದಕ್ಕೆ ಲಗ್ನ ತ್ತಾಗಿರುವ ಪಟ್ಟಣ್ಣುಲ್ಲಿ ಕಂಡ ಯಾವ ಸೊಲಕ್ಕೋಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಜೂ 26ನೇ ತಾರೀಖಿನಲ್ಲಿ ಈ ಕೋರ್ಟು ಮೊಹರೆ ನಮ್ಮ ದಸ್ತಖತ್‌ನಿನೀ ಕೊಡಲ್ಪಟ್ಟಿತು.

ಸೂಚನೆಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ	ಕೊಬಲಿಗೆ	ಯಾವಾಗ ದೇಣೇಜ್ಜೆಂ ಟಾದದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ	ಟಿ. ಗ
1	ಮೈಸೂರು ಇಂಪೀರಿಯಲ್ ಕಂಪನಿ ಯೀಜಪ್ಟ್ ನಂಜಂಣ	73 12 10	..	ಡಿಕರಿ	
2	ಧನಾಭಿವೃದ್ಧಿ ಬ್ಯಾಂಕ್ ಕೇಪಗಿರಿರಾವ್ ..	86 0 0	..	ಡಿಟೋ	
		159 12 10			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ತಾರೀಖು 8ನೇ ಜುಲೈ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಡಿಸ್ಟ್ರಿಕ್ಟು ಮಜಕೂರು ಮಂಡ್ಯ ತಾಲ್ಲೂಕು ಗ್ರಾಮಾಂತ್ರಗಳ ಸರಕಾರೀ ಬಂಜರು ಜಮೀನುಗಳಲ್ಲಿ ಯಿರುವ ಕುರಂಗದ ಕಲ್ಲುಗಳನ್ನು ಜಮಾಯಿಸಿಕೊಳ್ಳುವ ಗುತ್ತಿಗೆದನ್ನ 1889ನೇ ಇಸವಿ ಆಗಸ್ಟು ತಾರೀಖು 15 ರಲ್ಲು ಮಂಡ್ಯ ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್‌ದಾರ್ರ ರೂಬರೂ ಪೇಟೂಪ್ರೋಟಿಯಿಂದ ಹರಾಜು ಮಾಡಿಸುತ್ತಾಗಿ ಇಚ್ಛೆಯುಳ್ಳ ಜನಗಳು ಹಾಜರಾಗಿ ಚೆಪ ದರಖಾಸ್ತು ಮೂಲಕ ಪಡೆಯಬಹುದು.

2. ಈ ಕಂಟ್ರಾಕ್ಟು ವಾಯಿದೆಯು 1890ನೇ ಇಸವಿ ಮಾರ್ಚಿ ಆಖೈರುವರೆಗೆ ಪೂರ್ತಿಯಾಗಿರುತ್ತೆ.

3. ಚಡ ಸವಾಲ್‌ದಾರನು ತನ್ನ ಬೀಟು ಮೊಬಲಗ್ ಪೈಕಿ ನಾಲ್ಕರಲ್ಲಿ ಒಂದು ಭಾಗವನ್ನ ಶೇವಣಿಯಾಗಿ ತಕ್ಷಣವೇ ಹಾಜರ್ಮಾಡಬೇಕು, ಬೆಳೆದ ಮೊಬಲಗನ್ನು ಹರಾಜು ಹೇಳಿ ಲಾಗಾಯಿತು 15 ದಿವಸಗಳ ಒಳಗಾಗಿ ಜಮವೇ ಮಾಡಬೇಕು ಇದಕ್ಕೆ ತಪ್ಪಿದರೆ 'ಹಾಜರ್ಮಾಡಿದ ಶೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು. ಡಿಪಾಜಿಟ್ ಹಾಜರ್ಮಾಡದೇ ಯಿದ್ದಾಗ್ಯೂ ಅಥವಾ ಬಾಕೀ ಮೊಬಲಗು ಪೂರ್ತೀಮಾಡದೇ ತಪ್ಪಿದಾಗ್ಯೂ ಈ ಬಾಬು ಪುನಃ ಹರಾಜು ಮಾಡಲ್ಪಟ್ಟು ಅದರಿಂದ ಪೆಂಟೂಗುವ ನಷ್ಟಕ್ಕೆ ಮೊದಲ ಚಡ ಸವಾಲ್‌ದಾರನು ಗುರಿಯಾಗಿರುವನು, ಚಡಸವಾಲ್ ಮೊಬಲಗಿನ ಮೇಲೆ ೧ ರೂಪಾಯಿ ಒಂದಕ್ಕೆ ಒಂದು ಆಣೆ ಮೇರಗೆ ಲೋಕಲ್ ಸೆಸ್ಸನ್ನು ಸಹ ಚಡ ಸವಾಲ್‌ದಾರನು ಕೊಡಬೇಕು.